ದಿನಾಂಕ 21-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಜಿ.ಎಸ್.ಆರ್.ಕೆ. ರೆಡ್ಡಿ ವಕೀಲರಿಂದ

ದಾವೆಯನ್ನು ಸರ್ವೆ ನಂ. 103 ಮತ್ತು 104 ಜಮೀನುಗಳಿಗೆ ಸಂಬಂಧಿಸಿದಂತೆ ಹೂಡಿರುತ್ತೇನೆ. ಸರ್ವೆ ನಂ. 103 ಮತ್ತು 104 ಜಮೀನುಗಳು ನನ್ನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಗನಾದ ಕೆ. ಗಣೇಶ ಬಾಬು ಈತನ ಹೆಸರಿನಲ್ಲಿರುತ್ತವೆ ಎಂದು ನುಡಿಯುತ್ತಾರೆ. ನನ್ನ ಮಗನಾದ ಗಣೇಶಬಾಬು ಈತನಿಗೆ ಈಗ 40 ವರ್ಷ ವಯಸ್ಸು ಇರುತ್ತದೆ. ನನ್ನ ಮಗನಿಂದ ನಾನು ಅಧಿಕಾರ ಪತ್ರವನ್ನು ಪಡೆದಿರುವುದಿಲ್ಲ. ದಾವೆ ಹೂಡಲು ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿ ನಂ. 2 ಮತ್ತು 3 ರವರಿಗೂ ಮತ್ತು ದಾವಾ ಸ್ವತ್ತಿಗೂ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿ. ನಮ್ಮ ಜಮೀನುಗಳಿಗೆ ಸಂಬಂಧಿಸಿದಂತೆ ನಾನು ಹಿಸ್ಸಾ ಪೋಡಿಯನ್ನು ಮಾಡಿಸಿರುತ್ತೇನೆ. ಹಿಸ್ಸಾ ಪೋಡಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದಿಗಳ ತಂದೆಯ ಹೆಸರು ಸೀತಾರಾಮಯ್ಯ ಎಂದರೆ ಸರಿ. ಸೀತಾರಾಮಯ್ಯ ಈತನು ಮುಂಚೆ ಸರ್ವೆ ನಂ. 104 ರಲ್ಲಿ ಖರೀದಿ ಮಾಡಿದ್ದರು. ಸೀತಾರಾಮಯ್ಯ ಈತನು ಸರ್ವೆ ನಂ. 103 ರಲ್ಲಿ 1999-2000 ನೇ ಸಾಲಿನಲ್ಲಿ ಲಕ್ಷ್ಮಣ್ ರಾವ್‌ರವರಿಂದ 4 ಎಕರೆ 36 ಗುಂಟೆ ಜಮೀನನ್ನು 5 ಎಕರೆ 23 ಗುಂಟೆಯಲ್ಲಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 2004 ನೇ ಸಾಲಿನಲ್ಲಿ ಅಮ್ಮಾಜಿರವರಿಂದ ಸರ್ವೆ ನಂ. 103 ರಲ್ಲಿ 16 ಗುಂಟೆ ಮತ್ತು ಸರ್ವೆ ನಂ. 104 ರಲ್ಲಿ 1 ಎಕರೆ 26 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎರಡೂ ಸೇರಿ 2 ಎಕರೆ 2 ಗುಂಟೆ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.